ಟಿಪ್ಪಣಿ : ಸಕ್ಕರೆ ಕಾರ್ಖಾನೆಗಳು ಉತ್ಪಾದನೆ ಮಾಡುವ ಒಟ್ಟು ವಿದ್ಯುತ್ತಿನ ಪ್ರಮುಖಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಮಾನಿಟರ್ ಮಾಡುತ್ತಿಲ್ಲ.

ಇ,ಈ) ವಿದ್ಯುತ್ ಉತ್ಪಾದನೆಗೆ ತಗಲುವ ವೆಚ್ಚವು ವಿದ್ಯುತ್ ಉತ್ಪಾದಕರಿಗೆ ಮಾತ್ರ ತಿಳಿದಿರುತ್ತದೆ. ಸಾಮಾನ್ಯವಾಗಿ, ವಿದ್ಯುತ್ ಜಾಲಕ್ಕೆ ವಿದ್ಯುತ್ ಪೂರೈಸಲು ಈ ಸಕ್ಕರೆ ಕಾರ್ಖಾನೆಗಳಿಗೆ ಯಾವುದೇ ನಿರ್ಭಂದ ಇರುವುದಿಲ್ಲ. ಆದಾಗ್ಯೂ ರಾತ್ರಿ ವೇಳೆಯಲ್ಲಿ ವಿದ್ಯುತ್‌ನ ಬೇಡಿಕೆಯು ಕಡಿಮೆ ಇರುವುದರಿಂದ. ಹೆಚ್ಚಿನ ವೋಲ್ಟೇಜ್ ಮತ್ತು ಹೆಚ್ಚಿನ ಫ್ರೀಕ್ವೆನ್ಸಿಗಳನ್ನು ನಿಯಂತ್ರಿಸುವ ಹಾಗು ವಿದ್ಯುತ್ ಜಾಲದ ಸ್ಥಿರತೆಯನ್ನು ಕಾಪಾಡುವ ದೃಷ್ಟಿಯಿಂದ ರಾತ್ರಿಯ ಸಮಯವಾದ 11 ಗಂಟೆಯಿಂದ ಮಾರನೇ ದಿನ ಬೆಳಿಗ್ಗೆ 7 ಗಂಟೆವರೆಗೆ ತಮ್ಮ ವಿದ್ಯುತ್ ಉತ್ಪಾದನೆಯ ಶೇಕಡ 60ರಷ್ಟಕ್ಕೆ ವಿದ್ಯುತ್ ರಫ್ತನ್ನು ದಿನಾಂಕ 18–6–2004 ರಿಂದ ಸೀಮಿತಗೊಳಿಸಲು ಸಹ ವಿದ್ಯುತ್ ಉತ್ಪಾದಕಾ ಘಟಕಗಳಿಗೆ ತಿಳಿಸಲಾಗಿದೆ.

ಉ) ಇದನ್ನು ಸರ್ಕಾರವು ಪರಿಶೀಲಿಸುತ್ತದೆ.

654(674) : ಶ್ರೀ ಯಡಿಯೂರಪ್ಪ ಬಿ.ಎಸ್. (ಶಿಕಾರಿಪುರ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ಹಾಗೂ ಅನೇಕ ವರ್ಷಗಳಿಂದ ಕುಂಠಿತಗೊಂಡಿರುವ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಯಾವುವು;

ಆ) ಈ ಯೋಜನೆಗಳು ಯಾವಾಗ ಆರಂಭವಾಗಿವೆ ಹಾಗೂ ಯಾವಾಗ ಮುಗಿಯಬೇಕಾಗಿತ್ತು;

ಇ) ಈಗಿನ ಪ್ರಕಾರ ಯಾವಾಗ ಮುಗಿಯಲಿದೆ; (ವಿವರಗಳನ್ನು ಯೋಜನೆವಾರು ನೀಡುವುದು)

ಈ) ಸದರಿ ಯೋಜನೆಗಳಿಗೆ ಆರಂಭದಲ್ಲಿ ಮಾಡಿದ್ದ ಅಂದಾಜು ಎಷ್ಟು ಹಾಗೂ ಈಗಿನ ಪರಿಷ್ಕೃತ ಅಂದಾಜು ಎಷ್ಟು (ಯೋಜನಾವಾರು ವಿವರ ನೀಡುವುದು)?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ರಾಜ್ಯದಲ್ಲಿ ಪ್ರಗತಿಯಲ್ಲಿರುವ ಹಾಗೂ ಅನೇಕ ವರ್ಷಗಳಿಂದ *ಕುಂಠಿತಗೊಂಡಿರುವ ಭಾರಿ ನೀರಾವರಿ ಯೋಜನೆಗಳ ಸಂಖ್ಯೆ 20 ಹಾಗೂ* ಮಧ್ಯಮ ನೀರಾವರಿ ಯೋಜನೆಗಳ ಸಂಖ್ಯೆ 18 ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಯೋಜನೆಗಳ ಆರಂಭಿಕ ಹಾಗೂ ಮುಗಿದ/ಮುಗಿಯಬೇಕಾಗಿದ್ದ ವರ್ಷದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಈ) ಯೋಜನಾವಾರು ಅಂದಾಜು ಮತ್ತು ಪರಿಷ್ಕೃತ ಮೊತ್ತದ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ಪ್ರಗತಿಯಲ್ಲಿರುವ ಹಾಗೂ ಕುಂಠಿತಗೊಂಡಿರುವ ನೀರಾವರಿ ಯೋಜನೆಗಳ ವಿವರಗಳು ಭಾರಿ ಯೋಜನೆಗಳು

ಕ್ರ. ಸಂ.	ಯೋಜನೆ	ಅಂದಾಜು ಮೊತ್ತ	ಪರಿಷ್ಕೃತ ಅಂದಾಜು ಮೊತ್ತ	ಆರಂಭಿಕ ವರ್ಷ	ಪೂರ್ಣಗೊಳ್ಳುವ ವರ್ಷ (ನಿಗದಿತ)	(ಉದ್ದೇಶಿತ)
1.	ಕೃಷ್ಣಾ ಮೇಲ್ದಂಡೆ ಯೋಜನೆ ಘಟ್ಟ-1 ಮತ್ತು 2	357324	856841	1964	2000	2005
2.	ತುಂಗಾ ಮೇಲ್ದಂಡೆ	27140	105233	1991	2002	2007
3.	ತುಂಗಾಭದ್ರ ಎಡದಂಡೆ ಕಾಲುವೆ	19444	27511	1945	ಮುಗಿದಿದೆ	ಮುಗಿದಿದೆ
4.	ತುಂಗಭದ್ರಾ ಬಲಮೇಲ್ದಂಡೆ ಕಾಲುವೆ	2500	10500	1959	ಮುಗಿದಿದೆ	ಮುಗಿದಿದೆ
5.	ಬೆಣ್ಣೆತೋರಾ	7323	28597	1992	1999	2004
6.	ಭೀಮಾ ಏತ	9417	15300	1992	2000	2006
7.	ಹಿಪ್ಪರಗಿ	18670	90100	1973	1993	2007
8.	ಮಲಪ್ರಭಾ	16209	81600	1960	1981	2007
9.	ಘಟಪ್ರಭಾ-3	9054	94700	1972	1985	2007
10.	ದೂಧ್‌ಗಂಗಾ	12400	12400	1992	2005	2007
11.	ಮಾರ್ಕಂಡೇಯ	12000	20985	1998	2002	2007
12.	ಸಿಂಗಟಲೂರು	59550	78700	1993	2000	2008
13.	ಡಿ. ದೇವರಾಜು ಅರಸು ನಾಲೆ *	1350	32600	1979	1990	2005
14.	ಹಾರಂಗಿ *	12200	40000	1964	1974	2005
15.	ಹೇಮಾವತಿ *	58800	371000	1968		2040
16.	ಯಗಚಿ *	3538	30250	1983		2005
17.	ಕಬಿನಿ *	2480	123300	1959		2010
18.	ಕೆ.ಆರ್. ಸಾಗರ ಆಧುನೀಕರಣ *	1480	35000	1979		2005
19.	ಕಾರಂಜಾ	990.00	45000	1969	1997	2004
20.	ವಾರಾಹಿ	940	34500	1980	1995	2006
	ಮಧ್ಯಮ ಯೋಜನೆಗಳು					
1.	ಅಮರ್ಜಾ	570	11946	1978	1982	2004

1	2	3	4	5	6	7
2.	ಇಟಗಿ–ಸಾಸಲವಾಡ ಏತ	427	800	1992	2001	2005
3.	ಬಸಾಪುರ ಏತ	455	936	1992	2001	2005
4.	ಗಂಡೋರಿನಾಲಾ	6600	13295	1993	2001	2006
5.	ಹಿರೇಹಳ್ಳ	635	17850	1977	1980	2004
6.	ಮುಲ್ಲಾಮಾರಿ ಕೆಳದಂಡೆ	4500	14836	1973	1982	2006
7.	ಮಸ್ಕಿನಾಲಾ	2357	4700	1976	1980	2004
8.	ಹರಿನಾಲಾ	2695	5556	1998	2002	2005
9.	ಅರ್ಕಾವತಿ *	2260		1975	1989	2005
10.	ಚಿಕ್ಲಿಹೊಳೆ *	340	1800	1978		2005
11.	ಹುಚ್ಚನಕೊಪ್ಪಲು *	690	2750	1991		2005
12.	ಇಗ್ಗಲೂರು *	1075	6965	1979	1990	2005
13.	ಕಾಮಸಮುದ್ರ *	630	2875	1985		2005
14.	ಮಂಚನಬೆಲೆ *	1850	7465	1970	1982	2005
15.	ತಾರಕ *	170	5100	1970		2005
16.	ಉಡುತೊರೆಹಳ್ಳ *	3230	15610	1978	1995	2005
17.	ವಾಟೆಹೊಳೆ *	205	5202	1977		2005
18.	ಚುಲ್ಕಿನಾಲಾ	380	15276	1976	1982	2004

*ಕಾವೇರಿ ಕೊಳ್ಳದ ಯೋಜನೆಗಳಾದುದರಿಂದ ಪೂರ್ಣಗೊಳ್ಳುವ ವರ್ಷ ಭಾಗಶ: ತೋರಿಸಿಲ್ಲ.

657(867) : ಶ್ರೀ ಬಸವರಾಜು ಎ.ಎಸ್. (ಅರಸೀಕೆರೆ) ಮಾನ್ಯ ಪೌರಾಡಳಿತ ಮತ್ತು ಕೆಯುಐಡಿಎಫ್‌ಸಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿರುವ ಪುರಸಭೆ, ಪಟ್ಟಣ ಪಂಚಾಯಿತಿಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ಒದಗಿಸುವುದು)

ಆ) ಈ ಎಲ್ಲಾ ಪುರಸಭೆ, ಪಟ್ಟಣ ಪಂಚಾಯಿತಿಗಳ ಜನಸಂಖ್ಯೆ ಎಷ್ಟು ಹಾಗೂ ಇವುಗಳಿಂದ ಬರುವ ಆದಾಯವೆಷ್ಟು; (ವಿವರಗಳನ್ನು ಒದಗಿಸುವುದು)

ಇ) ಅರಸೀಕೆರೆ ತಾಲ್ಲೂಕು ಬಾಣಾವರವನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಈ) ಅರಸೀಕೆರೆ ಬಾಣಾವರ ಹಾಗೂ ಇತರೆ ದೊಡ್ಡ ಪಟ್ಟಣಗಳಿಗೆ ಕುಡಿಯುವ ನೀರು ಹಾಗೂ ಇತರೆ ಮೂಲಭೂತ ಸೌಕರ್ಯಕ್ಕಾಗಿ ಕೈಗೊಂಡಿರುವ ಕ್ರಮಗಳೇನು;

ಉ) ಹೇಮಾವತಿಯಿಂದ ಇದಕ್ಕಾಗಿ ಎಷ್ಟು ಸಾಮರ್ಥ್ಯದ ನೀರನ್ನು ಹರಿಸಲಾಗುತ್ತಿದೆ.